**ಶ್ರೀಮತಿ ಹೇಮಲತಾ ನಾಯಕ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಇವರು ಮಳೆಯ ಪ್ರಮಾಣ, ಮುಂಗಾರು ಬಿತ್ತನೆಯ ಕುರಿತು ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

**ಪ್ರಶ್ನೆ:**

ಕರ್ನಾಟಕ ರಾಜ್ಯದಲ್ಲಿ ಮುಂಗಾರು ಬೆಳೆಗೆ ಸಂಬಂಧಪಟ್ಟಂತೆ ನಿಗಧಿತ ಮಳೆಯ ಪ್ರಮಾಣ ಆಗದೆ ಇರುವುದರಿಂದ ರಾಜ್ಯದಲ್ಲಿ ಮಳೆ ಆಶ್ರಿತ ಬಿತ್ತನೆ ಪ್ರಮಾಣ ಕಡಿಮೆಯಾಗಿದ್ದು, ವಿಶೇಷವಾಗಿ ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಮುಂಗಾರು ಬೆಳೆಯನ್ನು ಬಿತ್ತನೆ ಮಾಡಿರುವುದಿಲ್ಲ. ಈ ವಿಷಯವನ್ನು ಮಾನ್ಯ ಕೃಷಿ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

2023 ಸಾಲಿನಲ್ಲಿ ಕರ್ನಾಟಕಕ್ಕೆ ಮುಂಗಾರು ಪ್ರವೇಶವು ಸುಮಾರು 10 ದಿನಗಳಷ್ಟು ತಡವಾಗಿ ಪ್ರವೇಶವಾಗಿದ್ದು ರಾಜ್ಯಾದ್ಯಂತ ನೈರುತ್ಯ ಮುಂಗಾರು ಮಳೆಯು ದಿನಾಂಕ 07.07.2023 ರಂತೆ ವಾಡಿಕೆ ಮಳೆ 257 ಮಿ.ಮೀ. ಗೆ ಪ್ರತಿಯಾಗಿ, 166 ಮಿ.ಮೀ ಮಳೆಯಾಗಿದ್ದು, ಶೇ. 36 ರಷ್ಟು ಕೊರತೆಯಾಗಿರುತ್ತದೆ.

ಉತ್ತರ ಕರ್ನಾಟಕದ ಜಿಲ್ಲೆಗಳಾದ ಬಾಗಲಕೋಟೆ, ಬಳ್ಳಾರಿ, ಬೀದರ್, ಬೆಳಗಾವಿ,ಧಾರವಾಡ, ಗದಗ, ಹಾವೇರಿ, ಕಲಬುರ್ಗಿ, ಕೊಪ್ಪಳ, ರಾಯಚೂರು, ವಿಜಯಪುರ , ವಿಜಯನಗರ, ಹಾಗೂ ಯಾದಗಿರಿ ರಲ್ಲಿ ದಿನಾಂಕ 07.07.2023 ರಂತೆ ವಾಡಿಕೆ ಮಳೆ 124 ಮಿ.ಮೀ. ಗೆ ಪ್ರತಿಯಾಗಿ, 76 ಮಿ.ಮೀ ಮಳೆಯಾಗಿದ್ದು, ಶೇ.39 ರಷ್ಟು ಕೊರತೆಯಾಗಿರುತ್ತದೆ.

2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ವಿವಿಧ ಕೃಷಿ ಬೆಳೆಗಳನ್ನು 82.35 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆ ಕೈಗೊಳ್ಳುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ. ದಿನಾಂಕ 07.07.2023 ರಂತೆ 26.82 ಲಕ್ಷ ಹೆಕ್ಟೇರ್ (ಶೇ33) ರಷ್ಟರಲ್ಲಿ ಬಿತ್ತನೆಯಾಗಿರುತ್ತದೆ.

ಉತ್ತರ ಕರ್ನಾಟಕ ಭಾಗದಲ್ಲಿ ಮುಂಗಾರು ಹಂಗಾಮಿಗೆ ಸುಮಾರು 37.67 ಲಕ್ಷ ಹೆಕ್ಟೇರ್ ರಷ್ಟು ಮಳೆಯಾಶ್ರಿತ ಹಾಗೂ 18.54 ಲಕ್ಷ ಹೆಕ್ಟೇರ್ ರಷ್ಟು ನೀರಾವರಿ ಪ್ರದೇಶದಲ್ಲಿ ಬಿತ್ತನೆ ಕೈಗೊಳ್ಳಲಾಗುತ್ತದೆ. 2023 ನೇ ಸಾಲಿನ ಮುಂಗಾರು ಹಂಗಾಮಿಗೆ ಸದರಿ ಜಿಲ್ಲೆಗಳಲ್ಲಿ 56.20 ಲಕ್ಷ ಹೆಕ್ಟೇರ್ ರಷ್ಟು ಬಿತ್ತನೆ ಗುರಿ ಇದ್ದು, ದಿನಾಂಕ 07.07.2023 ರ ವರದಿಗಳಂತೆ 20.60 ಲಕ್ಷ ಹೆಕ್ಟೇರ್ (ಶೇ.36) ರಷ್ಟರಲ್ಲಿ ಬಿತ್ತನೆಯಾಗಿರುತ್ತದೆ. ಈ ಜಿಲ್ಲೆಗಳಲ್ಲಿ ಪ್ರಮುಖವಾಗಿ ಮುಸುಕಿನ ಜೋಳ, ತೊಗರಿ, ಹತ್ತಿ, ಕಬ್ಬು, ಹೆಸರು, ಉದ್ದು, ಭತ್ತ, ಸೂರ್ಯಕಾಂತಿ ಹಾಗೂ ಶೇಂಗಾ ಬೆಳೆಗಳನ್ನು ಬೆಳೆಯಲಾಗುತ್ತದೆ.

(ಎನ್. ಚೆಲುವರಾಯಸ್ವಾಮಿ)
ಕೃಷಿ ಸಚಿವರು

ಸಂಖ್ಯೆ: AGRI/105/ACT/2023